# ಅಪರ ಹಿರಿಯ ಸಿವಿಲ್ ನ್ಯಾಯಾಲಯ, ಶ್ರೀರಂಗಪಟ್ಟಣ.

ಉಪಸ್ಥಿತರುಃ

ಶ್ರೀ ಮಹದೇವಪ್ಪ ಹೆಚ್., ಬಿ.ಎ., ಎಲ್.ಎಲ್.ಬಿ.
ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಶ್ರೀರಂಗಪಟ್ಟಣ.

ದಿನಾಂಕ 23 ನೇ ಜುಲೈ ಮಾಹೆ 2024

ಅಸಲು ದಾವಾ ಸಂಖ್ಯೆ ಃ 26/2024

ವಾದಿಗಳು ಃ ಶ್ರೀಮತಿ.ಆಶಾ ಮತ್ತು ಇತರರು

ವಿರುದ್ಧ

ಪ್ರತಿವಾದಿಗಳುಃ ಶ್ರೀ.ಶಂಕರ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ ಃ 1**

ಅರ್ಜಿದಾರರು ಃ ಶ್ರೀಮತಿ.ಆಶಾ ಮತ್ತು ಇತರರು

ವಿರುದ್ಧ

ಎದುರುದಾರರು ಃ ಶ್ರೀ.ಶಂಕರ ಮತ್ತು ಇತರರು

**ಃ ನ್ಯಾ.ಪ್ರ.ಸಂ. ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿಯ ಸಂಖ್ಯೆ 1 ರ ಮೇಲೆ ಮಾಡಲಾದ ಆದೇಶ ಃ**

ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಆದೇಶ ಕೋರಿ ಸಲ್ಲಿಸಿರುತ್ತಾರೆ.

2. ವಾದಿಗಳು ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ 1 ರ ಪ್ರಮಾಣ ಪತ್ರದಲ್ಲಿ ವಾದಿಗಳು ಅಕ್ಕ-ತಂಗಿ ಇದ್ದು, ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ದಾವಾ ಆಸ್ತಿಗಳಲ್ಲಿ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಕೋರಿ ಸಲ್ಲಿಸಲಾಗಿರುತ್ತದೆ. ವಾದಿಗಳು ಮತ್ತು ಪ್ರತಿವಾದಿ 1 ಮತ್ತು 2 ರವರು

ಒಟ್ಟು ಕುಟುಂಬದ ಸದಸ್ಯರಾಗಿದ್ದು, ಸದರಿ ಆಸ್ತಿಗಳನ್ನು ಪ್ರತಿವಾದಿ 1 ಮತ್ತು 2 ರವರು ಪ್ರತಿವಾದಿ 3 ರಿಂದ 4 ರವರಿಗೆ ನೋಂದಾಯಿತ ಕ್ರಯಪತ್ರಗಳ ಮುಖಾಂತರ ಮಾರಾಟ ಮಾಡಿರುತ್ತಾರೆ. ಸದರಿ ಪ್ರತಿವಾದಿ 1 ಮತ್ತು 2 ರವರು ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಯಾವುದೇ ಸ್ವತಂತ್ರ ಅಧಿಕಾರ ಇರುವುದಿಲ್ಲ. ಸದರಿ ವಾದಿಗಳಿಗೆ ಸಮಾನ ಭಾಗಾಂಶವಿರುತ್ತದೆ. ಪ್ರತಿವಾದಿಗಳು ದಾವಾ ಆಸ್ತಿಗಳು ತಮ್ಮ ಹೆಸರಿಗೆ ಇರುವುದನ್ನು ದುರುಪಯೋಗಪಡಿಸಿಕೊಂಡು ದಾವಾ ಆಸ್ತಿಗಳನ್ನು ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಆದ್ದರಿಂದ ದಾವೆಯು ಇತ್ಯರ್ಥವಾಗುವವರೆಗೆ ಬೇರೆ ಯಾರಿಗೂ ಪರಭಾರೆ ಮಾಡಬಾರದಂತೆ ತಾತ್ಕಲಿಕ ನಿರ್ಭಂಧಕಾಜ್ಞೆ ಆದೇಶ ಮಾಡಬೇಕು. ಒಂದು ವೇಳೆ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಆದೇಶ ಮಾಡದಿದ್ದಲ್ಲಿ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗಿರುತ್ತದೆ. ಆದ್ದರಿಂದ ಅರ್ಜಿಯಲ್ಲಿ ಕೋರಿಕೊಂಡಿರುವಂತೆ ಆದೇಶ ಮಾಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ವಾದಿಗಳು ಸದರಿ ಈ ಅರ್ಜಿಯನ್ನು ದಾವೆಯೊಂದಿಗೆ ಸಲ್ಲಿಸಿದ ನಂತರ ಪ್ರತಿವಾದಿ 4 ರವರು ತಮ್ಮ ಪರ ವಕೀಲರ ಮುಖಾಂತರ ಹಾಜರಾಗಿ ಲಿಖಿತ ತಕರಾರು ಹಾಗೂ ಸದರಿ ಈ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ತಮ್ಮ ಲಿಖಿತ ತಕರಾರಿನಲ್ಲಿ ಅರ್ಜಿಯ ಸಂಗತಿಗಳನ್ನು ಅಲ್ಲಗಳೆದು, ಮುಂದುವರೆದು ಮೇಗಳಾಪುರದ ಗ್ರಾಮದ ಮಹದೇವಪ್ಪ ಎನ್ನುವವರು ದಾವಾ ಐಟಂ ನಂ.2 ಮತ್ತು 3 ಆಸ್ತಿಗಳನ್ನು ಪ್ರತಿವಾದಿ 1 ಮತ್ತು 2 ರವರು ನೋಂದಾಯಿತ ಕ್ರಯಪತ್ರದ ಮುಖಾಂತರ ತಮ್ಮ ಕುಟುಂಬದ ಅವಶ್ಯಕತೆಗಾಗಿ ಮಾರಾಟ ಮಾಡಿ ಅದೇ ದಿನ ಸ್ವಾಧೀನವನ್ನು ವಹಿಸಿಕೊಟ್ಟಿರುತ್ತಾರೆ. ನಂತರ ದಿನಾಂಕಃ09.09.2009 ರಂದು ವಾದಿಗಳು ಹಾಗೂ ಪ್ರತಿವಾದಿಗಳು ಜಂಟೀಯಾಗಿ ಸರ್ವೆ ನಂ.86/ಪಿ2 ರಲ್ಲಿ 0.20.12 ಗುಂಟೆ, ಸರ್ವೆ ನಂ.85 ರಲ್ಲಿ 0.04.08 ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ಸದರಿ ಆಸ್ತಿಗಳಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಮೇಗಳಾಪುರ ಗ್ರಾಮದ ಮಹದೇವಪ್ಪ ಎನ್ನುವವರು 4 ನೇ ಪ್ರತಿವಾದಿ ಖರೀದಿ ಮಾಡಿರುತ್ತಾರೆ. ಸದರಿ ಮಹದೇವಪ್ಪರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಸದರಿ ಆಸ್ತಿಗಳು ಮಾರಾಟವಾದ ವಿಚಾರ ವಾದಿಗಳಿಗೆ ಗೊತ್ತಿರುತ್ತದೆ. ಸದರಿ ಆಸ್ತಿಗಳನ್ನು ಕುಟುಂಬದ ಅವಶ್ಯಕತೆಗಳಿಗೆ ಪ್ರತಿವಾದಿ 1 ಮತ್ತು 2 ಹಾಗೂ

ವಾದಿಗಳು ಮತ್ತು ಪ್ರತಿವಾದಿ 1 ಮತ್ತು 2 ರವರು ಮಾರಾಟ ಮಾಡಿದ್ದು, 19 ವರ್ಷಗಳು ಕಳೆದ ನಂತರ ದಾವೆಯನ್ನು ಈ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶಕ್ಕಾಗಿ ಸಲ್ಲಿಸಿರುತ್ತಾರೆ. ಸದರಿ ಆಸ್ತಿಗಳಲ್ಲಿ ವಾದಗಳಾಗಲಿ, ಪ್ರತಿವಾದಿ 1 ಮತ್ತು 2 ರವರಾಗಲೀ ಸ್ವಾಧೀನಾನುಭವದಲ್ಲಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಈ ಮೇಲಿನ ವಾಸ್ತವಾಂಶಗಳಿಂದ ನ್ಯಾಯಾಲಯದ ನಿರ್ಣಯಕ್ಕೆ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ.

<u>ಅಂಶಗಳು</u>

1. ವಾದಿಗಳು / ಅರ್ಜಿದಾರರು ಮೇಲ್ನೋಟದ ದಾವೆಯನ್ನು ಹೊಂದಿರುತ್ತಾರೆಯೆ ?

2. ವಾದಿಗಳು / ಅರ್ಜಿದಾರರು ತುಲನಾತ್ಮಕ ಅನುಕೂಲತೆ ಹೊಂದಿರುವರೆ ?

3. ಮಧ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸದೇ ಇದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ಹಾನಿ ಉಂಟಾಗುತ್ತದೆಯೇ ?

4. ಯಾವ ಆದೇಶ ?

5. ವಾದಿಗಳು ಮತ್ತು ಪ್ರತಿವಾದಿಯರ ಪರ ವಕೀಲರ ವಾದವನ್ನು ಆಲಿಸಲಾಯಿತು.

6. ಈ ಮೇಲಿನ ಅಂಶಗಳಿಗೆ ಕೆಳಗಿನಂತೆ ಉತ್ತರಿಸಲಾಗಿದೆ.

ಅಂಶ ನಂ.1 ಕ್ಕೆ ಃ ನಕಾರಾತ್ಮಕವಾಗಿ
ಅಂಶ ನಂ.2 ಕ್ಕೆ ಃ ನಕಾರಾತ್ಮಕವಾಗಿ
ಅಂಶ ನಂ.3 ಕ್ಕೆ ಃ ನಕಾರಾತ್ಮಕವಾಗಿ

ಅಂಶ ನಂ.4 ಕ್ಕೆ ಃ ಮಾಡಲಾದ ಅಂತಿಮ ಆದೇಶ ಈ
ಕೆಳಕಂಡ ಕಾರಣಗಳಿಗಾಗಿ

ಃಕಾರಣಗಳುಃ

7. ಅಂಶ ನಂ**.1** ರಿಂದ **3** ಃ ಅಂಶ ನಂ. 1 ರಿಂದ 3 ಒಂದಕ್ಕೊಂದು ಸಂಬಂಧ ಹೊಂದಿರುವುದರಿಂದ ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ವಾದಿಗಳು ಈ ದಾವೆಯನ್ನು ಪ್ರತಿವಾದಿಗಳ ವಿರುದ್ದ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆ ಆದೇಶ ಕೋರಿ ದಾವೆ ಸಲ್ಲಿಸಿರುವುದರಿಂದ ವಾದಿಗಳು ನ್ಯಾಯಾಲಯದ ಮುಂದೆ ಈ ಹಂತದಲ್ಲಿ ಮೇಲ್ನೋಟದ ದಾವೆಯನ್ನು ಹೊಂದಿರುತ್ತಾರೆ, ತುಲನಾತ್ಮಕ ಅನುಕೂಲತೆ ವಾದಿಗಳ ಪರವಾಗಿರುತ್ತದೆ, ಒಂದುವೇಳೆ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಎಂದು ರುಜುವಾತುಪಡಿಸಿದರೆ ಅರ್ಜಿಯಲ್ಲಿ ಕೋರಿಕೊಂಡ ಪರಿಹಾರಗಳನ್ನು ಪಡೆದುಕೊಳ್ಳಲು ಅರ್ಹರಿರುತ್ತಾರೆ.

8. ಈ ಹಂತದಲ್ಲಿ ವಾದಿಗಳು ನ್ಯಾಯಾಲಯದ ಮುಂದೆ ಪಹಣಿಗಳು, ಕ್ರಯಪತ್ರಗಳ ಧೃಢೀಕೃತ ನಕಲುಗಳು, ಆರ್.ಆರ್. ಇಂಡೇಕ್ಸ್ ಸೇರಿ ಒಟ್ಟು 35 ದಾಖಲೆಗಳನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತಾರೆ. ವಾದಿಗಳು ಹಾಗೂ ಪ್ರತಿವಾದಿ 1 ಮತ್ತು 2 ರವರು ತಂದೆ ಮತ್ತು ಮಕ್ಕಳಿರುತ್ತಾರೆ. ಸದರಿ ದಾವಾ ಆಸ್ತಿಗಳು ವಾದಿಗಳು ಮತ್ತು ಪ್ರತಿವಾದಿಗಳ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ. ಸದರಿ ಆಸ್ತಿಗಳನ್ನು ಯಾವತ್ತೂ ಸಹ ವಿಭಾಗ ಮಾಡಿಕೊಂಡಿರುವುದಿಲ್ಲವೆಂದು ತಿಳಿಸಿದ್ದು, ಈ ಹಂತದಲ್ಲಿ ನ್ಯಾಯಾಲಯವು ದಿನಾಂಕಃ17.03.2005 ರ ನೋಂದಾಯಿತ ಕ್ರಯ ಪತ್ರದ ಧೃಢೀಕೃತ ನಕಲನ್ನು ಪರಿಶೀಲಿಸಲಾಗಿ ದಾವಾ ಐಟಂ ನಂ.2 ಮತ್ತು 3 ಆಸ್ತಿಗಳನ್ನು ಪ್ರತಿವಾದಿ 1 ಮತ್ತು 2 ರವರು ತಮ್ಮ ಕುಟುಂಬದ ದರದು ನಿಮಿತ್ತವಾಗಿ ಹಾಗೂ ಕುಟುಂಬದ ಖರ್ಚಿಗಾಗಿ ಮಾರಾಟ ಮಾಡಲಾಗಿರುತ್ತದೆಂದು ನಮೂದು ಇರುತ್ತದೆ. ತದನಂತರ ಸದರಿ ಕ್ರಯಪತ್ರದಂತೆ ಎಂ.ಆರ್.ನಂ.44/2009-10 ರಂತೆ ಎಂ.ಎಸ್.ಮಹದೇವಪ್ಪರವರ ಹೆಸರಿಗೆ ಐಟಂ ನಂ.2 ಮತ್ತು 3 ಆಸ್ತಿಗಳ

ಖಾತೆಗಳು ಬದಲಾವಣೆ ಆಗಿದ್ದು, ತದ ನಂತರ ಸದರಿ ಆಸ್ತಿಗಳನ್ನು ದಿನಾಂಕಃ29.01.2010 ರಂದು 4 ನೇ ಪ್ರತಿವಾದಿಗೆ ನೋಂದಾಯಿತ ಕ್ರಯ ಪತ್ರದ ಮುಖಾಂತರ ಮಾರಾಟ ಮಾಡಿದ್ದು, ಸದರಿ ಕ್ರಯಪತ್ರದಂತೆ 4 ನೇ ಪ್ರತಿವಾದಿಯ ಹೆಸರಿಗೆ ಆಸ್ತಿಗಳ ಖಾತೆಯು ಎಂ.ಆರ್.ಹೆಚ್ 33/2019-20 ರಂತೆ ದಾವಾ ಆಸ್ತಿಗಳ ಖಾತೆಗಳು ಬದಲಾವಣೆ ಆಗಿ ಆ ಪ್ರಕಾರ ಸದರಿ ದಾವಾ ಆಸ್ತಿಗಳಲ್ಲಿ 4 ನೇ ಪ್ರತಿವಾದಿಯು ಮಾಲೀಕನಾಗಿ ಶಾಂತಿಯುತ ಸ್ವಾಧೀನಾನುಭವದಲ್ಲಿರುತ್ತಾನೆಂದು ವಾದಿಗಳು ಹಾಜರುಪಡಿಸಿರುವ ದಾಖಲಿಗಳಿಂದಲೇ ಕಂಡುಬಂದಿರುತ್ತದೆ. ಸದರಿ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೋ ಅಥವಾ ಸ್ವಯಾರ್ಜಿತ ಅಸ್ತಿಗಳು ಎನ್ನುವ ಬಗ್ಗೆ ವಿಚಾರಣೆಯ ಅವಶ್ಯಕತೆ ಇರುತ್ತದೆ. ಸದರಿ ಪ್ರತಿವಾದಿ 4 ರವರು ದಾವಾ ಆಸ್ತಿಗಳಲ್ಲಿ ಮಾರಾಟ ಮಾಡುವ ಸಲುವಾಗಿ ಸ್ಕೆಚ್ ವಗ್ಯೆರೆ ಮಾಡಿದ ಬಗ್ಗೆಯಾಗಲೀ ಅಥವಾ ಬೇರೆಯವರಿಗೆ ಮಾರಾಟ ಮಾಡಿದ ಬಗ್ಗೆಯಾಗಲಿ ಕ್ರಯದ ಕರಾರು ಪತ್ರವನ್ನು ಮಾಡಿಕೊಟ್ಟ ಬಗ್ಗೆಯಾಗಲೀ ವಾದಿಗಳು ಯಾವುದೇ ದಾಖಲೆಗಳನ್ನು ನ್ಯಾಯಾಲಯದ ಮುಂದೆ ಈ ಹಂತದಲ್ಲಿ ಹಾಜರುಪಡಿಸಿರುವುದಿಲ್ಲ. 4 ನೇ ಪ್ರತಿವಾದಿಯು ನೇರವಾಗಿ ದಾವಾ ಆಸ್ತಿಗಳನ್ನು ವಾದಿಗಳು ಹಾಗೂ ಪ್ರತಿವಾದಿ 1 ಮತ್ತು 2 ರವರ ಕುಟುಂಬದ ಸದಸ್ಯರಿಂದ ಖರೀದಿ ಮಾಡಿದ ಖರೀದಾರರು ಆಗಿರುವುದಿಲ್ಲ. ವಾದಿಗಳು ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಮೇಲ್ನೋಟದ ದಾವೆಯನ್ನು ಹೊಂದಿದ್ದು, ತುಲನಾತ್ಮಕ ಅನುಕೂಲತೆ ವಾದಿಗಳ ಪರವಾಗಿರುತ್ತದೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದರೆ ಪ್ರತಿವಾದಿಗಳಿಗಿಂತ ವಾದಿಗಳಿಗೆ ತುಂಬಲಾರದಂತಹ ನಷ್ಟ ಉಂಟಾಗುತ್ತದೆ ಎಂದು ರುಜುವಾತುಪಡಿಸಿರುವುದಿಲ್ಲ. ಆದ್ದರಿಂದ ಅಂಶ ನಂ.1 ರಿಂದ 3 ಕ್ಕೆ ನಕರಾತ್ಮಕವಾಗಿ ಉತ್ತರಿಸಲಾಗಿದೆ.

10. <u>ಅಂಶ ನಂ.**4** ಃ</u> ಈ ಮೇಲಿನ ಅಂಶ ನಂ.**1** ರಿಂದ 3 ರಲ್ಲಿ ಚರ್ಚಿಸಲಾದಂತೆ ಮಾಡಲಾದ ಆದೇಶ ಃ

<u>ಆದೇಶ</u>

ವಾದಿಗಳು ದಿವಾಣಿ ಪ್ರಕ್ರಿಯಾ ಸಂಹಿತೆ
ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ

ಸಲ್ಲಿಸಿರುವ ಮಧ್ಯಂತರ 1 ಅರ್ಜಿಯನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇಲ್ಲ.

**(**ಆದೇಶವನ್ನು ಬೆರಳಚ್ಚುಗಾರರಿಗೆ ಗಣಕ ಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಿ ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ **23.07.2024** ರಂದು ಘೋಷಿಸಲಾಯಿತು**.)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಶ್ರೀರಂಗಪಟ್ಟಣ.